# “ಕಲಿಯುಗದಲ್ಲಿ ಕೃಷ್ಣಾರ್ಜುನರು”

## ಅರ್ಥಾತ್ ಸೇಡಿನ ಚಕ್ರವ್ಯೂಹ ನಾಟಕ ಪ್ರದರ್ಶನ




ಧಾರವಾಡ : ರಂಗಕಲೆ ನಮ್ಮ ಗ್ರಾಮೀಣ ಬದುಕಿನ ಮೂಲಸೆಲೆ. ನಾಟಕಗಳು ಮನಸ್ಸಿಗೆ ಮುದ ನೀಡುವ ಬಾಳಿಗೆ ಹದ ತರುವ ಕಲಾ ಮಾಧ್ಯಮವಾಗಿದೆ ಎಂದು ಹಿರಿಯ ರಂಗಕರ್ಮಿ ಬಸವರಾಜ ಬೆಂಗೇರಿ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಕಲಾ ಮಂಟಪವು ದಿನಾಂಕ ೨೭-೪-೨೦೧೯ ರಂದು ಆಯೋಜಿಸಿದ್ದ “ಕಲಿಯುಗದಲ್ಲಿ ಕೃಷ್ಣಾರ್ಜುನರು” ಅರ್ಥಾತ್ ಸೇಡಿನ ಚಕ್ರವ್ಯೂಹ ನಾಟಕ ಪ್ರದರ್ಶನವನ್ನು ರೀದಮ್ ನುಡಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ವೃತ್ತಿ ರಂಗಭೂಮಿ ಕ್ಷೀಣಿಸುತ್ತಿದ್ದ ಕಾಲ ಘಟ್ಟದಲ್ಲಿ ಏಣಗಿ ಬಾಳಪ್ಪನವರು, ಗರುಡ ಸದಾಶಿವರಾಯರು ಹಾಗೂ ಕಂದಗಲ್ ಹನುಮಂತರಾಯರಂತಹ ರಂಗಭೂಮಿಯ ಧ್ರುವತಾರೆಗಳು ಗ್ರಾಮೀಣ ಬದುಕಿನ ಬಡತನದಲ್ಲಿ ಬೆಳೆದರೂ ರಂಗಭೂಮಿಯನ್ನು ಶ್ರೀಮಂತಗೊಳಿಸಿದವರಾಗಿದ್ದರು. ಕ.ವಿ.ವ. ಸಂಘವು ನಾಡಿನ ಹೆಸರಾಂತ ಕಲೆ ಹಾಗೂ ಕಲಾವಿದರನ್ನು ಪ್ರೋತ್ಸಾಹಿಸಿದ್ದರಿಂದ ಅವರೆಲ್ಲಾ ಕಲಾಸಾಧನೆ ಮಾಡಲು ಸಾಧ್ಯವಾಯಿತು ಎಂದರು.

ಅತಿಥಿಗಳಾಗಿ ಆಗಮಿಸಿದ್ದ ಹೆಸ್ಕಾಂ ನೌಕರರ ಸಂಘದ ಉಪಾಧ್ಯಕ್ಷ ಜಿ.ವ್ಹಿ. ರಾಜು ಮಾತನಾಡಿ, ಜನರ ವರ್ತನೆಯಲ್ಲಿ ಪರಿವರ್ತನೆ ತರುವುದೇ ನಾಟಕದ ಮೂಲ ತಿರುಳು. ಕಲಾಭಿಮಾನಿಗಳು ನಾಟಕ ನೋಡಿ ಖುಷಿ ಪಟ್ಟರೆ ಸಾಲದು, ನಾಟಕದ ನೈಜ ಸಂದೇಶವನ್ನು ಅರ್ಥೈಸಿಕೊಂಡು ಸಮಾಜದಲ್ಲಿ ಮೌಲ್ಯಾಧಾರಿತ, ನೈತಿಕ ಜೀವನ ಸಾಗಿಸಿದಾಗ ನಾಟಕಕ್ಕೊಂದು ಬೆಲೆ ಹಾಗೂ ನೆಲೆ ಸಿಕ್ಕಂತಾಗುವುದೆಂದು ಹೇಳಿದರು.

ಕಲಾಮಂಟಪದ ಸಂಚಾಲಕರಾದ ಶಂಕರ ಕುಂಬಿ ಮಾತನಾಡಿ, ಕನ್ನಡಿಗರ ಹೃದಯದಲ್ಲಿ ಕನ್ನಡತ್ವದ ಅಭಿಮಾನ ಮೂಡಿಸಲು ಸಾಂಸ್ಕೃತಿಕ ಹಿರಿಮೆಯನ್ನು ಕರ್ನಾಟಕ ವಿದ್ಯಾವರ್ಧಕ ಸಂಘದ ಮೂಲಕ ನಾಡಿನ ಜನತೆಗೆ ತಲುಪಿಸುವ ಕಾರ್ಯ ಶ್ಲಾಘನೀಯ. ಕಲಾ ಮಂಟಪವು ರಾಜ್ಯದ ವಿವಿಧ ಭಾಗಗಳಲ್ಲಿ ಸಂಸ್ಕೃತಿಯ ಜೊತೆಗೆ ಎಲ್ಲ ಪ್ರಕಾರದ ಕಲಾ ಮಾಧ್ಯಮಗಳನ್ನು ಪರಿಚಯಿಸಿ ಪ್ರೋತ್ಸಾಹಿಸುವ ಕಾರ್ಯ ಮಾಡುತ್ತಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕ.ವಿ.ವ. ಸಂಘದ ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ ಮಾತನಾಡಿ, ಇಂದಿನ ಸಂಕೀರ್ಣ ಸಮಾಜದಲ್ಲಿ ನಾಟಕಗಳು ಕೇವಲ ಮನರಂಜನಾ ಸಾಧನಗಳು ಎಂಬ ಭ್ರಮೆಯಿಂದ ಹೊರಬಂದು ನೋಡುಗರ ಬದುಕನ್ನು ಹಸನಾಗಿಸುವ ನಮ್ಮ ನಡೆ-ನುಡಿಗಳಲ್ಲಿ ಬದಲಾವಣೆ ತರುವ ದಿವ್ಯತೆಯನ್ನು ಹೊಂದಿವೆ. ಆರೋಗ್ಯಕರ ಸಮಾಜ ನಿರ್ಮಾಣವೇ ರಂಗಕಲೆಯ ಉದ್ದೇಶ ಎಂದರು.

ಕಾರ್ಯಕ್ರಮದಲ್ಲಿ ಸಂಘದ ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕ ವೀರಣ್ಣ ಒಡ್ಡೀನ ನಿರೂಪಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಎಸ್.ಬಿ. ಗಾಮನಗಟ್ಟಿ ವಂದಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ(ಇಟಗಿ), ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಾನಂದ ಭಾವಿಕಟ್ಟಿ, ಮನೋಜ ಪಾಟೀಲ ಹಾಗೂ ಅರವಿಂದ ಕಪಲಿ, ಸಿ.ಜಿ. ಹಿರೇಮಠ, ಸಿ.ಎಸ್. ಪಾಟೀಲಕುಲಕರ್ಣಿ, ಯಕ್ಕೇರಪ್ಪ ನಡುವಿನಮನಿ, ಪ್ರಕಾಶ ಮಲ್ಲಿಗವಾಡ, ಎಫ್.ಬಿ. ಕಣವಿ, ಮಾರ್ತಾಂಡಪ್ಪ ಕತ್ತಿ, ಮೇಘನಾ ಹುಕ್ಕೇರಿ, ಸುರೇಶ ಹಾರೋಬಿಡಿ, ಮುಂತಾದವರಿದ್ದರು. ಡಿ.ಆರ್.ಪೂಜಾರ ರಚಿಸಿ, ಮಂಜುನಾಥ ವಾಲಿಕಾರ ನಿರ್ದೇಶನದ ‘ಕಲಿಯುಗದ ಕೃಷ್ಣಾರ್ಜುನರು’ ಅರ್ಥಾತ್ ‘ಸೇಡಿನ ಚಕ್ರವ್ಯೂಹ’ ಎಂಬ ನಾಟಕವನ್ನು ಕಾಡನಕೊಪ್ಪದ ಛತ್ರಪತಿ ಶಿವಾಜಿ ನಾಟಕ ಸಂಘದವರು ಮನೋಜ್ಞವಾಗಿ ಪ್ರಸ್ತುಪಡಿಸಿ, ನಾಟಕ ಪ್ರೇಕ್ಷಕರ ಮನಮುಟ್ಟುವಲ್ಲಿ ಯಶಸ್ವಿಯಾಯಿತು.

**ಶಂಕರ ಕುಂಬಿ**
ಸಂಚಾಲಕರು, ಕಲಾ ಮಂಟಪ
ಮೊ: ೯೪೪೮೮-೦೧೧೪೧